ಶ್ರೀ ಎಂ. ಪಿ. ಪ್ರಕಾಶ್.—ಪ್ರತಿಯೊಂದು ಕೇಂದ್ರ ಸ್ಥಳದಿಂದಲೂ ಬಸ್‌ಗಳು ಪ್ರಾರಂಭವಾಗ ಬೇಕೆಂದರೆ ಕಷ್ಟವಾಗುತ್ತದೆ. ಪ್ರತಿಯೊಂದು ತಾಲ್ಲೂಕು ಕೇಂದ್ರದಿಂದಲೂ ಬಸ್‌ನ ವ್ಯವಸ್ಥೆ ಇರಬೇಕು. ಈಗ ತಿರುಚಿಯಿಂದ ಬರತಕ್ಕ ಬಸ್ಸು ಬನವಾಸಿ, ಸೊರಬ, ಶಿರಾಳಕೊಪ್ಪ ಮಾರ್ಗವಾಗಿ ಬರುತ್ತವೆ. ಇದರಿಂದ ಶಿಕಾರಿಪುರ ಮತ್ತು ಸೊರಬದ ಜನರಿಗೆ ಅನುಕೂಲವಾಗುತ್ತದೆ. ಆದರೆ ಹಿಂದೆ ಹಿರೇಕೆರೂರಿನಿಂದ ಶಿರಾಳ ಕೊಪ್ಪಕ್ಕೆ ಬಂದು, ಮತ್ತೆ ಶಿರಾಳಕೊಪ್ಪದಿಂದ ಹಿರೇಕೆರೂರು ಮಾರ್ಗವಾಗಿ ಬೆಂಗಳೂರಿಗೆ ಬರಬೇಕಾಗಿತ್ತು ಇದರಿಂದ ಸಂಸ್ಥೆಗೆ ಸರಿಯಾದ ವರಮಾನ ಬರುತ್ತಿಲ್ಲವೆಂದು ಕ್ಯಾನ್ಸಲ್ ಮಾಡಿದ್ದೇವೆ. 1982ನೇ ಸಾಲಿನಲ್ಲಿ ಏಪ್ರಿಲ್ ಮತ್ತು ಮೇ, ಮತ್ತು 83ನೇ ಸಾಲಿನಲ್ಲಿ ಏಪ್ರಿಲ್ ಮತ್ತು ಮೇ ಈ 4 ತಿಂಗಳಲ್ಲಿ ಮಾತ್ರ ಇದನ್ನು "ಎ" ರೂಟ್ ಆಗಿ ಪರಿವರ್ತನೆ ಮಾಡಿದ್ದೇವೆ. ಉಳಿದ ಸಂದರ್ಭದಲ್ಲಿ "ಬಿ" ರೂಟ್ ಆಗಿ ಮಾಡಿರುತ್ತೇವೆ. ಅಲ್ಲಿ ಹೆಚ್ಚಿನ ಪ್ರಯಾಣಿಕರ ಒತ್ತಡ ಇಲ್ಲ ಮತ್ತು ವರಮಾನ ಕೂಡ ಇಲ್ಲವೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಪ್ರತಿದಿನ ಬಸ್ ತುಂಬಿರುತ್ತದೆ. ಸೊರಬದಿಂದ ಶಿರಾಳ ಕೊಪ್ಪದವರೆಗೂ ಸುಮಾರು 10–15 ಜನರು ನಿಂತುಕೊಂಡೇ ಬರುತ್ತಾರೆ. ನಾನೂ ಆ ಬಸ್‌ನಲ್ಲಿ ಓಡಾಡು ತ್ತಿರುತ್ತೇನೆ. ಇದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ತಾಲ್ಲೂಕು ಕೇಂದ್ರಗಳ ಸಮಸ್ಯೆ ನನಗೆ ತಿಳಿದಿರು ವುದರಿಂದ ಅಲ್ಲಿ ಬಸ್‌ಗಳನ್ನು ಓಡಿಸಬೇಕೆಂದು ನಾನು ಹೇಳುತ್ತಿದ್ದೇನೆ. ಆದರೆ ನೀವು ಎ, ಬಿ, ಸಿ ಎಂದು ಮಾಡಿರುವುದು ನನಗೆ ಗೊತ್ತಿಲ್ಲ. ಈ ಮಾರ್ಗ ಲಾಭದಾಯಕವಾಗಿ ನಡೆಯುತ್ತಿದೆ. ಆದರೆ ಇದು ನಷ್ಟದಲ್ಲಿ ನಡೆಯುತ್ತಿದೆ. ಹೇಳುವುದಾದರೆ ಕೆ.ಎಸ್.ಆರ್.ಟಿ.ಸಿ.ಯವರ ಅವ್ಯವಹಾರ ಇರಬಹುದು. ಪ್ರತಿದಿನ ಸುಮಾರು 60–70 ಜನ ಪ್ರಯಾಣಿಕರು ಪ್ರಯಾಣ ಮಾಡುತ್ತಾರೆ.

ಶ್ರೀ ಎಂ. ಪಿ. ಪ್ರಕಾಶ್.—ಅದು ಬಹುಶಃ ಲಕ್ಸುರಿ ಬಸ್ ಆಗಿರುವುದರಿಂದ ಟಿಕೆಟ್ ದರ ಜಾಸ್ತಿ ಯಾಗುತ್ತದೆಂದು ಶಿರಾಳಕೊಪ್ಪ ಮತ್ತು ಶಿಕಾರಿಪುರದ ಜನರು ಶಿವಮೊಗ್ಗಕ್ಕೆ ಬಂದು ಅಲ್ಲಿಂದ ಬೇರೆ ಬಸ್‌ಗಳನ್ನು ಹಿಡಿದು ಬರುತ್ತಿದ್ದಾರೆಂದು ಕಾಣುತ್ತದೆ. ನಾವು ಎ.ಬಿ.ಸಿ. ಎಂದು ಪ್ರತಕ್ಕೆ ವರ್ಗೀಕರಣ ಮಾಡಿದ್ದೇವೆಂದರೆ, "ಎ" ರೂಟ್ ಎಂದರೆ ಲಾಭದಾಯಕವಾಗಿ ನಡೆಯುವುದು, "ಬಿ" ರೂಟ್ ಎಂದರೆ ನಾವು ಓಡಿಸತಕ್ಕ ವಾಹನಗಳ ಖರ್ಚನ್ನು ಮಾತ್ರ ಕೊಡುತ್ತವೆಯೇ ಹೊರತು ಆಡಳಿತಾತ್ಮಕ ಖರ್ಚನ್ನು ಕೊಡದಿರುವುದು ಮತ್ತು "ಸಿ" ರೂಟ್ ಎಂದರೆ ನಾವು ಏನು ಬಸ್‌ಗಳನ್ನು ಓಡಿಸುತ್ತೇವೆ ಆದರ ಖರ್ಚನ್ನೂ ಕೂಡ ಕೊಡದೇ ಇರುವುದು. ನಾನು ಆಗಲೇ ಹೇಳಿದಂತೆ 1982ರ ಏಪ್ರಿಲ್ ಮತ್ತು ಮೇ, ಹಾಗೂ 1983ರಏಪ್ರಿಲ್ ಮತ್ತು ಮೇ—ಈ 4 ತಿಂಗಳನ್ನು ಬಿಟ್ಟರೆ ಉಳಿದ ಸಂದರ್ಭದಲ್ಲಿ ನಾವು ನಡೆಸತಕ್ಕ ಬಸ್‌ಗಳ ಖರ್ಚನ್ನು ಮಾತ್ರ ಕೊಟ್ಟಿದ್ದೇವೆ. ತಾವು ಹೇಳಿದ ಹಾಗೆ ಅಲ್ಲಿ ಸಾಕಷ್ಟು ಒತ್ತಡ ಇದ್ದರೆ ಯೋಚನೆ ಮಾಡೋಣ. ಮಾನ್ಯ ಯಡಿಯೂರಪ್ಪನವರು ಜನರು ಆರಿಸಿ ಕಳುಹಿಸಿದ್ದಾರೆ ಆದ್ದರಿಂದ ಅವರು ನನ್ನ ಮೇಲೆ ಒತ್ತಡ ತರುತ್ತಿದ್ದಾರೆಂದು ಅಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಕೊನೆಯಪಕ್ಷ ಒಂದು ಆರ್ಡಿನರಿ ಬಸ್ಸನ್ನಾದರೂ ಹಾಕಿಸಿಕೊಡಿ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು

ವಿಷಯ : ವಿವಿಧ ಶಾಸನಗಳನ್ನು ಒಟ್ಟುಗೂಡಿಸುವುದು

ಪ್ರ. 222 (6) ಶ್ರೀ ಭೀಮಣ್ಣ ಖಂಡ್ರೀ (ಬಾಲ್ಕಿ).—ಮಾನ್ಯ ಕಾನೂನು ಸಂಸದೀಯ ಹಾಗೂ ವಸತಿ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

(ಅ) ಸಂಬಂಧಪಟ್ಟ ರಾಜ್ಯಗಳಲ್ಲಿ ಅಂದರೆ ಹೈದರಾಬಾದು,–ಕರ್ನಾಟಕ, ಬಾಂಬೆ–ಕರ್ನಾಟಕ, ಹಳೇ ಮೈಸೂರು, ಬಳ್ಳಾರಿ (ಮದ್ರಾಸ್) ಮತ್ತು ಕೊಡಗು ಪ್ರದೇಶಗಳಲ್ಲಿ ಒಂದೇ ವಿಷಯದ ಮತ್ತು ಸ್ವರೂಪದ ಮೇಲಿನ ವಿವಿಧ ಅಧಿನಿಯಮಗಳನ್ನು ಒಂದೇ ಅಧಿನಿಯಮದಲ್ಲಿ ಕ್ರೋಢೀಕರಿಸಲಾಗಿದೆಯೋ ?

(ಆ) ಇಂದಿನವರೆಗೆ ಕ್ರೋಢೀಕರಿಸಿದಂತೆ ಅಧಿನಿಯಮಗಳ ಪಟ್ಟಿ.

(ಇ) ಈ ಸಂಬಂಧದಲ್ಲಿ ಸರ್ಕಾರವು ಕೈಕೊಂಡ ಕ್ರಮ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ಹಾಗೂ ವಸತಿ ಮಂತ್ರಿಗಳು).—

(ಅ) ವಿವಿಧ ಪ್ರದೇಶಗಳ 329 ಅಧಿನಿಯಮಗಳನ್ನು ಕ್ರೋಢೀಕರಿಸಿ ಸುಮಾರು 75 ಏಕರೀತಿಯ ಅಧಿನಿಯಮಗಳನ್ನು ಅಧಿನಿಯಮಿಸಲಾಗಿದೆ.

(ಆ) ಅನುಬಂಧದಲ್ಲಿ ತೋರಿಸಿರುವಂತೆ ಸುಮಾರು 42 ಅಧಿನಿಯಮಗಳನ್ನು ಇನ್ನೂ ಕ್ರೋಢೀ ಕರಿಸಬೇಕಾಗಿದೆ.

(ಇ) ಇವೆಲ್ಲವುಗಳನ್ನೂ ಕ್ರೋಢೀಕರಿಸುವ ಪ್ರಸ್ತಾವಗಳನ್ನು ಪರ್ಯಾಲೋಚಿಸಲಾಗುತ್ತಿದೆ.

ANNEXURE

List of Acts which are to be consolidated and which are in force in different regions

Sl. No.	Belgaum Area (Former Bombay Area)	Mysore Area (Former Mysore Area)	Gulbarga Area (Former Hyderabad Area)	Mangalore/Kollegal Area (Former Madras Area)
1	2	3	4	5
1.	Betting Tax Act, 1925 (Bombay Act 6 of 1925)	2. Betting Tax Act, 1932 (Act 9 of 1932)	3. Horse Racing and Betting Tax Regulations 1358 (Fasli 49 of 1938)	4. Betting Tax Act, 1935 (Act 20 of 1935)
5.	Race Course Licensing Act, 1912	6. Race Course Licensing Act 8 of 1952		
7.	Religious Endowment (Extension to Canara) Act 1865 (Bombay Act 7 of 1865)	8. Religious and Charitable Institutions Act, 1927 (Act No. 7 of 1927)	9. Hyderabad Endowment Regulation Act, 1939 (Fasli)	10. Temple Fund Management 1956 (Coorg Act 8 of 1956)
11.	Hindu Places of Public Worship (Entry Authorisation) Act, 1956 (Bombay Act 31 of 1956)			12. Temple Entry Authorisation Act, 1947 (Act 5 of 1947)
13.	Public Trust Act, 1950 (Bombay Act 29 of 1950)			14. Madras Hindu Religious Charitable Institutions Act, 1956
15.	Public Trust Registration Act 1935 (Bombay Act 25 of 1935)			
16.	Personal Inam Abolition Act, 1952 (Bombay Act 42 of 1952)	17. Religious Charitable Inams Abolition Act, 1955 (Act 18 of 1955)	18. Abolition of Inams Act, 1955 (Hyderabad Act 8 of 1955)	19. Inams Act 1869 (Act 8 of 1869)
20.	Service Inams (Useful to Community) Abolition Act) 1953 (Bombay Act 70 of 1955)			

1	2	3	4	5
21.	Devadasi Protection Act, 1934 (Bombay Act 10 of 1934)			22. Devadasi (Preservation of Dedication Act, 1937)
23.	Lotteries and Prize Competition Controlling Act, 1948 (Bombay Act 54 of 1948)	24. Lotteris and Prize Competition Controling Act, 1951 (Act 27 of 1951)	25. Prize Competition Controlling Tax (Repealing Act 1955) (Hyderabad Act 11 of 1956)	
			26. Fisheries Act, 1356 F. (Hyderabad Act 1356 F)	27. Fisheries Madras Amendment Act, 1927 (Act 2 of 1927)
			28. Ferries Act 1314 F. (Hyderabad Act 2 of 1314 F)	29. Canals and Public Ferries Act, 1890 (Act 2 of 1890)
30.	Famine Relief Fund Act, 1935 (Bombay Act 19 of 1936)		31. Famine Stricken Pattadars Property Protection Act, 1331 F (Hyderabad Act 3 of 1331 F)	32. Famine Relief Fund Act, 1936 (Act 26 of 1936)
			33. Public Health Act, 1944 (Act 10 of 1944)	34. Public Health Act, 1943
35.	Drugs Control Act, 1952 (Bombay Act 29 of 1952)	36. Drugs Control Act, 1950 (Act 6 of 1950)		37. Drugs Control Act, 1949.
38.	Leapers (Bombay Amendment) Act, 1955 (Bombay Act 20 of 1955)	39. Leapers Act, 1925 (Act 4 of 1925)		40. Leapers Act, 1954 (4 of 1954)
		41. Poisons Act, 1910 (5 of 1910)	42. Poisons Act, 1932 F	

ಅನುಬಂಧ

ವಿವಿಧ ಪ್ರಾಂತಗಳಲ್ಲಿ ಜಾರಿಯಲ್ಲಿರುವ ಕ್ರೋಢೀಕರಿಸಬೇಕಾದ ಆಧಿನಿಯಮಗಳ ಪಟ್ಟಿ

ಕ್ರಮ ಸಂಖ್ಯೆ	ಬೆಳಗಾವಿ ಪ್ರದೇಶ (ಹಿಂದಿನ ಬಾಂಬೆ ಪ್ರದೇಶ)	ಮೈಸೂರು ಪ್ರದೇಶ (ಹಿಂದಿನ ಮೈಸೂರು ಪ್ರದೇಶ)	ಗುಲ್ಬರ್ಗ ಪ್ರದೇಶ (ಹಿಂದಿನ ಹೈದರಾಬಾದು (ಪ್ರದೇಶ)	ಮಂಗಳೂರು, ಕೊಳ್ಳೇಗಾಲ ಪ್ರದೇಶ (ಹಿಂದಿನ ಮದ್ರಾಸು ಪ್ರದೇಶ)
1	2	3	4	5
1.	1925 ರ ಪಣ ತೆರಿಗೆ ಆಧಿನಿಯಮ (1925 ರ ಬಾಂಬೆ ಆಧಿನಿಯಮ 6)	2. 1932 ರ ಪಣ ತೆರಿಗೆ ಆಧಿನಿಯಮ (1932 ರ ಆಧಿನಿಯಮ 6)	3. 1358 ರ ಕುದುರೆ ಪಂದ್ಯ ಮತ್ತು ಪಣ ತೆರಿಗೆ ವಿನಿಮಯಗಳು (1938ರ ಫಸಲಿ 49)	4. 1935 ರ ಪಣ ತೆರಿಗೆ ಆಧಿನಿಯಮ (1935 ರ ಆಧಿನಿಯಮ 20)
5.	1912 ರ ಕುದುರೆ ಜೂಜು (ರೇಸ್ ಕೋರ್ಸ್) ಅನುಜ್ಞಾ ಆಧಿನಿಯಮ	6. 1952 ರ ಕುದುರೆ ಜೂಜು (ರೇಸ್ ಕೋರ್ಸ್) ಅನುಜ್ಞಾ ಆಧಿನಿಯಮ		
7.	1965 ರ ಧಾರ್ಮಿಕ ಉಂಬಳಿ (ದಕ್ಷಿಣ ಕನ್ನಡ ಜಿಲ್ಲೆ ವಿಸ್ತರಣೆ) ಆಧಿನಿಯಮ (1865 ರ ಬಾಂಬೆ ಆಧಿನಿಯಮ 7)	8. 1927 ರ ಧಾರ್ಮಿಕ ಮತ್ತು ಧರ್ಮಾರ್ಥವಾದ ಸಂಸ್ಥೆಗಳ ಆಧಿನಿಯಮ (1927 ರ ಆಧಿನಿಯಮ 7)	9. 1939 ರ ಹೈದರಾಬಾದ್ ಧರ್ಮದಾಯ ವಿನಿಯಮನ ಆಧಿನಿಯಮ, (ಫಸಲಿ 1939)	10. 1956 ರ ದೇವಾಲಯ ನಿಧಿಗಳ ಕಾರ್ಯ ನಿರ್ವಹಣೆ (1956 ರ ಕೊಡಗು ಆಧಿನಿಯಮ 8)
11.	1956 ರ ಹಿಂದೂ ಸಾರ್ವಜನಿಕ ಪೂಜಾ ಸ್ಥಳಗಳ (ಪ್ರವೇಶಾಧಿಕಾರ) ಆಧಿನಿಯಮ (1956 ರ ಬಾಂಬೆ ಆಧಿನಿಯಮ 31)			12. 1947 ರ ದೇವಾಲಯ ಪ್ರವೇಶ ನೀಡಿಕೆ ಅಧಿಕಾರ ಆಧಿನಿಯಮ (1947 ರ ಆಧಿನಿಯಮ 5)
13.	1950 ರ ಸಾರ್ವಜನಿಕ ಆಧಿನಿಯಮ (1950 ರ ಬಾಂಬೆ ಆಧಿನಿಯಮ 29)			14. 1956 ರ ಮದರಾಸು ಹಿಂದೂ ಧಾರ್ಮಿಕ ಹಾಗೂ ಧರ್ಮದಾಯ ಸಂಸ್ಥೆಗಳ ಆಧಿನಿಯಮ 1956
15.	1935 ರ ಸಾರ್ವಜನಿಕ ನ್ಯಾಸ ನೋಂದಣಿ ಆಧಿನಿಯಮ (1935 ರ ಬಾಂಬೆ ಆಧಿನಿಯಮ 25)			
16.	1952 ರ ವ್ಯಕ್ತಿಗತ ಇನಾಂ ರದ್ದಿಯಾತಿ ಆಧಿನಿಯಮ (1952 ರ ಬಾಂಬೆ ಆಧಿನಿಯಮ 42)	17. 1955 ರ ಮತೀಯ ಧಾರ್ಮಿಕ ಇನಾಂ ರದ್ದಿಯಾತಿ ಆಧಿನಿಯಮ (1955ರ ಆಧಿನಿಯಮ 18)	18. 1955 ರ ಇನಾಂ ರದ್ದಿಯಾತಿ ಆಧಿನಿಯಮ (1955ರ ಹೈದರಾಬಾದು ಆಧಿನಿಯಮ 8)	19. 1869 ರ ಇನಾಂ ಆಧಿನಿಯಮ (1869 ರ ಆಧಿನಿಯಮ 8)
20.	1953ರ (ಸಮುದಾಯಕ್ಕೆ ಉಪಯುಕ್ತ) ಸೇವಾ ಇನಾಂಗಳ ರದ್ದಿಯಾತಿ ಆಧಿನಿಯಮ (1953ರ ಬಾಂಬೆ ಆಧಿನಿಯಮ 70)			

1	2	3	4	5
21.	1934ರ ದೇವದಾಸಿ ಸಂರಕ್ಷಣಾ ಅಧಿನಿಯಮ (1934ರ ಬಾಂಬೆ ಅಧಿನಿಯಮ 10)			22. 1937ರ ದೇವದಾಸಿ (ದೇವರಿಗೆ ಮುಡಿಪಿಡುವುದನ್ನು ತಡೆಗಟ್ಟುವ) ಅಧಿನಿಯಮ
23.	1948ರ ಲಾಟರಿಗಳು ಮತ್ತು ಬಹುಮಾನ ಸ್ಪರ್ಧೆಗಳ ನಿಯಂತ್ರಣ ಅಧಿನಿಯಮ (1948ರ ಬಾಂಬೆ ಅಧಿನಿಯಮ 54)	24. 1951ರ ಲಾಟರಿಗಳು ಮತ್ತು ಬಹುಮಾನ ಸ್ಪರ್ದೆಗಳ ನಿಯಂತ್ರಣ ಅಧಿನಿಯಮ (1951ರ ಅಧಿನಿಯಮ 27)	25. ಬಹುಮಾನ ಸ್ಪರ್ಧೆಗಳ ನಿಯಂತ್ರಣ ತೆರಿಗೆ (ನಿರಸನ ಅಧಿನಿಯಮ 1955) 1956ರ ಹೈದರಾಬಾದು ಅಧಿನಿಯಮ 11	
			26. 1356 ನೇ ಫಸಲಿಯ ಮಾನುಗಾರಿಕೆ ಅಧಿನಿಯಮ (1356 ಫಸಲಿಯ ಹೈದರಾಬಾದ್) ಅಧಿನಿಯಮ	27. 1927 ರ ಮಾನುಗಾರಿಕೆ (ಮದ್ರಾಸು ತಿದ್ದುಪಡಿ) ಅಧಿನಿಯಮ (1927 ರ ಅಧಿನಿಯಮ 2)
			28. 1314 ನೇ ಫಸಲಿಯ ಕಡವುಗಳ ಅಧಿನಿಯಮ 29 (1314 ನೇ ಫಸಲಿಯ ಹೈದರಾಬಾದು ಅಧಿನಿಯಮ 2)	29. 1890 ರ ನಾಲೆಗಳು ಮತ್ತು ಸಾರ್ವಜನಿಕ ಕಡವುಗಳ ಅಧಿನಿಯಮ (1890 ರ ಅಧಿನಿಯಮ)
30.	1935 ರ ಕ್ಷಾಮ ಪರಿಹಾರ ನಿಧಿ ಅಧಿನಿಯಮ (1936 ರ ಬಾಂಬೆ ಅಧಿನಿಯಮ 19)		31. 1331 ನೇ ಫಸಲಿಯ ಕ್ಷಾಮ ಪೀಡಿತ ಪಟ್ಟಾದಾರರ ಸ್ವತ್ತು ಸಂರಕ್ಷಣಾ ಅಧಿನಿಯಮ (1331 ನೇ ಫಸಲಿಯ ಹೈದರಾಬಾದು ಅಧಿನಿಯಮ 3)	32. 1936 ರ ಕ್ಷಾಮಪರಿಹಾರ ನಿಧಿ ಅಧಿನಿಯಮ (1936 ರ ಅಧಿನಿಯಮ 26)
			33. 1944 ರ ಜನಾರೋಗ್ಯ ಅಧಿನಿಯಮ (1944 ರ ಅಧಿನಿಯಮ 10)	34. 1943 ರ ಜನಾರೋಗ್ಯ ಅಧಿನಿಯಮ
35.	1952 ರ ಔಷಧ ನಿಯಂತ್ರಣ ಅಧಿನಿಯಮ (1952 ರ ಬಾಂಬೆ ಅಧಿನಿಯಮ 29)		36. 1956 ರ ಔಷಧ ನಿಯಂತ್ರಣ ಅಧಿನಿಯಮ (1950 ರ ಅಧಿನಿಯಮ 6)	37. 1949 ರ ಔಷಧ ನಿಯಂತ್ರಣ ಅಧಿನಿಯಮ
38.	1955 ರ ಲೇಪರ್‌ಗಳ (ಬಾಂಬೆ ತಿದ್ದುಪಡಿ) (1955 ರ ಬಾಂಬೆ ಅಧಿನಿಯಮ 20)		39. 1925 ರ ಲೇಪರ್‌ಗಳ ಅಧಿನಿಯಮ (1925 ರ ಅಧಿನಿಯಮ 4)	40. 1954 ರ ಲೇಪರ್‌ಗಳ ಅಧಿನಿಯಮ (1954 ರ ಅಧಿನಿಯಮ 4)
			41. 1910 ರ ವಿಷವಸ್ತುಗಳ (1910 ರ ಅಧಿನಿಯಮ 5)	42. 1932 ರ ವಿಷವಸ್ತುಗಳ ಅಧಿನಿಯಮ